## <u>ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ತಿ.ನರಸೀಪುರ.</u>

## <u>ಸಿ.ಸಿ.ನಂ.**2363/2021**</u>

ಸರಕಾರ ಪರಃ ಬನ್ನೂರು ಪೊಲೀಸ್ ಠಾಣೆ, ತಿ.ನರಸೀಪುರ -ವಿರುದ್ಧ- ದಿವ್ಯಾ

<u>ದೋಷಾರೋಪಣೆ</u>

ನಾನು ಚೇತನ್ ಅನ್ನಾಧಾನಿ ಮಂಜುನಾಥ, ಬಿ.ಎ.ಎಲ್., ಎಲ್.ಎಲ್.ಎಂ., ಪ್ರ. ದ. ನ್ಯಾ. ದಂ., ತಿ.ನರಸೀಪುರ ಈ ಮೂಲಕ,

ಆರೋಪಿತರಾದಃ

ದಿವ್ಯಾ.ಎನ್.
ಕೋಂ.ಲೇಟ್.ರಾಮಕೃಷ್ಣೇಗೌಡ,
ಸುಮಾರು 55 ವರ್ಷ ವಯಸ್ಸು,
ವಾಸ ಯಾಚೇನಹಳ್ಳಿ ಗ್ರಾಮ,
ತಿ.ನರಸೀಪುರ ತಾಲ್ಲೂಕು.

<u>ನಿಮ್ಮ ಮೇಲಿರುವ ಆರೋಪಣೆ ಏನೆಂದರೆ,</u>

ದಿನಾಂಕ 10.06.2021 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಟಿ.ನರಸೀಪುರ ತಾಲ್ಲೂಕು, ಬನ್ನೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಯಾಚೇನಹಳ್ಳಿ ಗ್ರಾಮದ ಚಾಸಾ.1 ರವರ ಮನೆಯ ಮುಂಭಾಗದ ಸಾರ್ವಜನಿಕರು ತಿರುಗಾಡುವ ರಸ್ತೆಯಲ್ಲಿ ಚಾಸಾ.1 ರವರೊಂದಿಗೆ ಆರೋಪಿಯಾದ ನೀವು ಮನೆಯ ವಿಚಾರದಲ್ಲಿ ಜಗಳ ತೆಗೆದು ಚಾಸಾ.1 ರವರನ್ನು ಬೇವರ್ಸಿ, ಸೂಳೆಮುಂಡೆ ಎಂದು ಅವಾಚ್ಯ ಶಬ್ಧದಿಂದ ಬೈಯ್ದಿದಿರುತ್ತೀರಿ ಆ ಮೂಲಕ ನೀವು ಭಾ.ದಂ.ಸಂ. ಕಲಂ 504 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ.1 ರವರ ಬಲತೆ್ೋಳು ಹಾಗೂ ಬಲತೊಡೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ, ಆ ಮೂಲಕ ನೀವು ಭಾ.ದಂ.ಸಂ. ಕಲಂ 324 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾನ್ನು ನನ್ನ ನ್ಯಾಯಿಕ ವ್ಯಾಪ್ತಿಯಲ್ಲಿ ಮಾಡಿದ್ದೀರಿ.

ಆದುದರಿಂದ ಈ ಆರೋಪಣೆಯನ್ನು ನಿಮ್ಮ ಮೇಲಿಟ್ಟಿದ್ದು, ಅದರ ವಿಚಾರಣೆಯು ನಿಮ್ಮ ಮೇಲೆ ನಡೆಯತಕ್ಕದ್ದೆಂದು ಈ ಮೂಲಕ ಆದೇಶಿಸುತ್ತೇನೆ.

ಪ್ರಶ್ನೆಃ ಇದೀಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೇ

ಉತ್ತರಃ

ಪ್ರಶ್ನೆಃ ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ?
ವಿಚಾರಣೆ ಆಗಬೇಕೇ?

ಉತ್ತರಃ

(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿತರಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ.)

ದಿನಾಂಕಃ ಪ್ರ.ದ.ನ್ಯಾ.ದಂ., ತಿ.ನರಸೀಪುರ.